


# ಸರಪಳಿಗೆ ಸಿಕ್ಕ ಗಜ ಜೀವನ

ಆನೆಗಳನ್ನು ನೋಡಿದಾಕ್ಷಣ ಅದರ ಸವಾರಿ ಮಾಡುವ, ಆಶೀರ್ವಾದ ಪಡೆಯುವ ಆಸೆ ಹುಟ್ಟುವುದು ಸಾಮಾನ್ಯ. ಆದರೆ ಆನೆಗೆ ಇದರಿಂದ ಸಂತೋಷ ಲಭಿಸುತ್ತದೆಯೇ? ಸರಪಳಿಗಳ ನಡುವಿನ ಆನೆಗಳ ಯಾತನೆ ನಿಮಗೆ ಗೊತ್ತೇ?



ಸುಪರ್ಣಾ ಗಂಗೂಲಿ
ಸಹ ಸಂಸ್ಥಾಪಕಿ
ಸಿಯುಪಿಎ ಮತ್ತು ಡಬ್ಲ್ಯುಆರ್‌ಆರ್‌ಸಿ

ಒಬ್ಬ ಮನುಷ್ಯನನ್ನು ದಿನದ 22-24 ತಾಸು ಕೋಳ, ಸರಪಳಿಗಳಿಂದ ಬಂಧಿಸಿ ಇಡುವುದು ಹಾಗೂ ಆತನಿಗೆ ಬಾಯಿಗೆ ರುಚಿ ಎನಿಸಿದರೂ ಪೌಷ್ಟಿಕವಲ್ಲದ ಕೆಟ್ಟ ಆಹಾರ ನೀಡಿ ಕೂಡಿಹಾಕುವುದರ ಬಗ್ಗೆ ಯೋಚಿಸಿ. ಜೊತೆಗೆ ಆತನನ್ನು ಆತನ ಪಾದ ಮತ್ತು ಚರ್ಮಕ್ಕೆ ಹೊಂದಿಕೆಯಾಗದ ನೆಲದಲ್ಲಿ ಕಟ್ಟಿಹಾಕಿದ್ದಾರೆ. ಇರಿಸಿಕೊಂಡವರು ಚುಚ್ಚುತ್ತಾ ಹೊಡೆಯುತ್ತಾ ಆತನಿಗೆ ಒಗ್ಗದ, ಆತನ ಆರೋಗ್ಯ ಮತ್ತು ಶರೀರಕ್ಕೆ ಮಾರಕವಾದ ಕೆಲಸ, ಚಟುವಟಿಕೆ ಮಾಡಿಸುತ್ತಿದ್ದಾರೆಂದು ಯೋಚಿಸಿ. ಸ್ವಲ್ಪ ಹಿಂದೆ ಹೋಗಿ ನೋಡುವುದಾದರೆ, ಈ ಮನುಷ್ಯ ಚಿಕ್ಕವನಿದ್ದಾಗ ಅವನನ್ನು ಕದ್ದು ಅಥವಾ ಅಪಹರಿಸಿ ಅವನ ಪ್ರೀತಿಯ ಮನೆಯವರಿಂದ ಬೇರ್ಪಡಿಸಲಾಗಿದೆ ಆತನ ಸಹಜ ವಾತಾವರಣದಿಂದ ಕಿತ್ತು ಅವನಿಗೆ ಅಪರಿಚಿತವೂ, ಹಿಂಸಾತ್ಮಕವೂ, ಭಯಕಾರಕವೂ, ಗೊಂದಲಮಯವೂ ಆದ ಪರಿಸರದಲ್ಲಿ ತಂದು ಇಡಲಾಗಿದೆ. ಈ ಅಪತ್ಕಾರಿಯಾದ ಸ್ಥಳಕ್ಕೆ ಹೊಂದಿಕೊಳ್ಳಲು ಬೇಕಾದ ಮಾರ್ಗದರ್ಶನವನ್ನು ಆತನಿಗೆ ನೀಡಲಾಗಿಲ್ಲ; ಮನೆಯ ಹಿರಿಯರ ಜ್ಞಾನ, ಅನುಭವಗಳೂ ಆತನಿಗೆ ಲಭ್ಯವಿಲ್ಲ.

ಇದು ಭಾರತದ ಪಳಗಿಸಿದ ಆನೆ(ಸಾಕಾನೆ)ಗಳ ಕಥೆಯೂ ಹೌದು. ಸಂಪ್ರದಾಯ, ಪ್ರವಾಸೋದ್ಯಮ ಹಾಗೂ ಮನೋರಂಜನೆಯ ಹೆಸರಿನಲ್ಲಿ ಅವುಗಳನ್ನು ಹೊಡೆದು, ಬಡಿದು ಹಿಂಸಿಸಲಾಗುತ್ತದೆ ಮತ್ತು ಪಳಗಿಸಿ ಅಧೀನಗೊಳಿಸಲಾಗುತ್ತಿದೆ.

ಒಂದು ಆನೆ ಭವ್ಯವೂ ಬಲಶಾಲಿಯೂ ಆಗಿ ಕಾಣಬಹುದು; ಆದರೆ ಅದರ ಚರ್ಮ ಮತ್ತು ಶರೀರ ಅತ್ಯಂತ ಸೂಕ್ಷ್ಮವಾದದ್ದು. ಆದರ ಕಾಲುಗಳು ಮೃದುವಾದ ಮೆತ್ತೆಯಂತಹ ವಸ್ತುವಿನಿಂದ ರಚನೆಯಾಗಿದ್ದು ಸಹಜವಾದ ಮಣ್ಣಿನ ನೆಲದ ಮೇಲೆ ನಡೆಯಲು ಯೋಗ್ಯವಾಗಿವೆ. ಆದರ ಶರೀರದಲ್ಲಿ 109 ಸೂಕ್ಷ್ಮ ಸ್ಥಳಗಳಿದ್ದು, ಅವುಗಳಿಗೆ ಚುಚ್ಚಿದಾಗ ಅಥವಾ ಹೊಡೆದಾಗ ಅದಕ್ಕೆ ತುಂಬ ನೋವಾಗುತ್ತದೆ. ಆದರ ಕಾಲುಗಳು ಸದಾ ನಡೆದಾಡುವುದಕ್ಕೆ ಅನುಕೂಲವಾದಂಥವು ಹೊರತು ಒಂದೆಡೆ ನಿಲ್ಲುವಂಥವಲ್ಲ. ಅದರ ಆಹಾರದಲ್ಲಿ ತುಂಬ ವೈವಿಧ್ಯ ಬೇಕು. ಮತ್ತದಕ್ಕೆ ಕುಡಿಯಲು ತುಂಬ ನೀರು ಬೇಕು; ಮತ್ತು ಕುಟುಂಬ ಹಾಗೂ ಸಮಾಜ ಜೀವನದ ಬಗೆಗಿನ ಆದರ ಸ್ವಭಾವ ಪ್ರಾಣಿಪ್ರಪಂಚದಲ್ಲೇ ತುಂಬ ಮುಂದುವರಿದದ್ದು. ಈ ನಿಟ್ಟಿನಲ್ಲಿ ಮಾನವನಂತೆಯೇ ಇರುವ ಈ ಪ್ರಾಣಿ ಏಕಾಂಗಿಯಾಗಿ ಇರಲು ಬಯಸುವುದಿಲ್ಲ.

ಭಾರತವೀಗ ಸ್ವತಂತ್ರವಾಗಿ 69 ವರ್ಷಗಳನ್ನು ಪೂರೈಸಿರುವ ಈ ಹೊತ್ತಿನಲ್ಲಿ ದೇಶದ ಅತ್ಯಂತ ಗೌರವಾನ್ವಿತವಾದ ಈ ವನ್ಯಜೀವಿ ಸಮೂಹವನ್ನು ಬಹಳಷ್ಟು ಒಡೆಯಲಾಗಿದೆ.

ಸಾಕಷ್ಟು ಜೀವಹಾನಿಯಾಗಿದೆ; ಒಂದೆಡೆ ಪ್ರೀತಿಸಿದರೆ ಇನ್ನೊಂದೆಡೆ ಕೊಲ್ಲಲಾಗುತ್ತಿದೆ; ದೇಶಾದ್ಯಂತ ವಿವಿಧ ಸಂಸ್ಥೆಗಳಲ್ಲಿ ಜೀತದಾಳಾಗಿ ದುಡಿಸಲಾಗುತ್ತಿದೆ.

ಭಾರತದಲ್ಲಿನ ಏಷ್ಯಾದ ಆನೆಗಳನ್ನು 'ಎಲಿಫಸ್ ಮ್ಯಾಕ್ಸಿಮಸ್' ಎಂದು ಕರೆಯಲಾಗುತ್ತದೆ; ಇನ್ನು 'ಕಳೆದುಕೊಳ್ಳುವುದಕ್ಕೆ ಏನೂ ಇಲ್ಲ' ಎಂಬಂತಹ ಸ್ಥಿತಿ ಈ ಆನೆಗಳದ್ದು.

1900ರಲ್ಲಿ ದೇಶದ ಆನೆಗಳ ಸಂಖ್ಯೆ ಒಂದು ಲಕ್ಷವಿದ್ದರೆ ಅದೀಗ 25-30 ಸಾವಿರಕ್ಕೆ ಇಳಿದಿದೆ. ದೇಶದಲ್ಲಿ ಕಾಡಾನೆಗಳು ತುಂಬ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತಿವೆ; ವಾಸಸ್ಥಾನವಾದ ಕಾಡುಗಳು ಕರಗುತ್ತಿವೆ; ಕಳ್ಳಬೇಟೆ ನಡೆಯುತ್ತಿದೆ; ಆನೆದಾರಿಗಳು ಕಡಿತಗೊಂಡು ಅವುಗಳ ಸಂಚಾರಕ್ಕೆ ತಡೆಯಾಗುತ್ತಿದೆ; ಆ ಮೂಲಕ ಆಹಾರ ಸಂಪಾದನೆ, ಸಂತಾನ ಸೃಷ್ಟಿಗೂ ಅಡ್ಡಿಯಾಗುತ್ತಿದೆ... ಇವೆಲ್ಲಾ ಸಾಲದೆಂಬಂತೆ ಕಾಡಾನೆ ಮರಿಗಳನ್ನು ಕಾಡಿನಿಂದ ಹೊರಕ್ಕೆ ತಂದು ದೇಶದ ಧಾರ್ಮಿಕ ಕ್ಷೇತ್ರಗಳಿಗೆ ಅಥವಾ ಪ್ರವಾಸೋದ್ಯಮದ ಉದ್ದೇಶಗಳಿಗೆ ಒದಗಿಸಲಾಗುತ್ತಿದೆ.

ಭಾರತದಲ್ಲಿ ಸುಮಾರು 3,500-4000 ಆನೆಗಳು ಖಾಸಗಿಯವರ ವಶದಲ್ಲಿವೆ. ಅದರಲ್ಲಿ ಕೇರಳ ಮತ್ತು ರಾಜಸ್ಥಾನಗಳದ್ದು ಸಿಂಹಪಾಲು. ಈ ರಾಜ್ಯಗಳು ಒಟ್ಟು ಸುಮಾರು 850 ಆನೆಗಳನ್ನು ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿ ಇರಿಸಿಕೊಂಡಿವೆ. ತಮಿಳುನಾಡು, ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಧಾರ್ಮಿಕ ಸಂಸ್ಥೆ ಹಾಗೂ ಖಾಸಗಿ ಮಾಲೀಕತ್ವದ ಅಡಿಯಲ್ಲಿ ಒಟ್ಟು ಸುಮಾರು 160-180 ಆನೆಗಳಿವೆ. ಮೃಗಾಲಯ ಮುಂತಾದ ಕಡೆ ಇವೆ; ಕಾಡಿನಲ್ಲಿ ಮರದ ದಿಮ್ಮಿಗಳನ್ನು ಸಾಗಿಸುವುದು ಮಾತ್ರವಲ್ಲ, ಭಿಕ್ಷಾಟನೆಗೂ ಆನೆಗಳನ್ನು ಬಳಸಲಾಗುತ್ತಿದೆ.

2011ರಲ್ಲಿ ಕರ್ನಾಟಕದಲ್ಲಿ ಖಾಸಗಿ ಮಾಲೀಕತ್ವದ ಆನೆಗಳ ಕುರಿತು ಒಂದು ಸಮೀಕ್ಷೆ ನಡೆಯಿತು. ದೇಶದ ಪರಿಸರ ಮತ್ತು ಹವಾಮಾನ ಇಲಾಖೆ ಪ್ರಾಣಿಕಲ್ಯಾಣ ಮಂಡಳಿಯು ಕರ್ನಾಟಕ ಅರಣ್ಯ ಇಲಾಖೆಯ ಸಹಯೋಗದಿಂದ ಈ ಸಮೀಕ್ಷೆಯನ್ನು ನಡೆಸಿದ್ದು, ಅದರಲ್ಲಿ ಹಲವು ಗಂಭೀರ ಲೋಪದೋಷಗಳು ಬೆಳಕಿಗೆ ಬಂದವು. ಹೆಚ್ಚಿನ ಆನೆಗಳ ಬಗ್ಗೆ ಯಾವುದೇ ದಾಖಲೆ ಪತ್ರಗಳಿರಲಿಲ್ಲ; ಅಕ್ರಮ ವಿಧಾನಗಳಿಂದ ಅವುಗಳನ್ನು ಪಡೆದುಕೊಳ್ಳಲಾಗಿತ್ತು. ಆನೆಗಳ ಮಾರಾಟಗಾರರು ಮತ್ತು ಖರೀದಿಸಿದ ಮಾಲೀಕರು ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳ ಸಹಕಾರದಿಂದ ಇದನ್ನೆಲ್ಲ ನಡೆಸಿದ್ದರು.

## ■ ದುರ್ಗಾ ಪರಮೇಶ್ವರಿ ದೇವಸ್ಥಾನದ ದುರ್ಗಾ

ಈ ಆನೆಯ ಹೆಸರು ದುರ್ಗಾ; ಈಕೆ ಬೆಂಗಳೂರಿನ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿದ್ದಾಳೆ. 10 ಚದರ ಮೀ. ವಿಸ್ತೀರ್ಣದ ಕಾಂಕ್ರೀಟ್ ಛಾವಣಿಯ ಶೆಡ್‌ನಲ್ಲಿ ಆಕೆಯನ್ನು ಇರಿಸಲಾಗಿದೆ. ಎಡಭಾಗದಲ್ಲಿ ಸೂರ್ಯನ ಬೆಳಕು ಮತ್ತು ಗಾಳಿಗಾಗಿ 6ಮೀ. ಉದ್ದ , 3 ಮೀ. ಅಗಲದ ತೆರೆದ ಸ್ಥಳವಿದೆ. ಆದರೆ ಅದನ್ನು ಕೂಡ ಬಳಸಿಕೊಳ್ಳಲು ದುರ್ಗಾ ಸ್ವತಂತ್ರಳಲ್ಲ; ಏಕೆಂದರೆ ಆಕೆಯ ಕಾಲುಗಳನ್ನು ಸರಪಳಿಗಳಿಂದ ಬಿಗಿಯಲಾಗಿದೆ. ಆಕೆಗೆ ಯಾವುದೇ ದಿಕ್ಕಿನಲ್ಲಿ ಚಲಿಸಲಾಗುವುದಿಲ್ಲ. ಅವಳ ಕಾಲಿನ ಉಗುರು ಒಡೆದಿದೆ ಮತ್ತು ಹೊರಗಿನ ಚರ್ಮ ಅತಿಯಾಗಿ ಬೆಳೆದಿದೆ; ಇದು ಸಾಕಷ್ಟು ವ್ಯಾಯಾಮ ಇಲ್ಲದುದರ ಮತ್ತು ಗಮನ ಕೊಡದಿರುವುದರ ಲಕ್ಷಣ. ಆಕೆ ಮಾಮೂಲಿನಂತೆ ಕಂಡರೂ ಕೂಡ ಬೆಳವಣಿಗೆಯು ಕುಂಠಿತವಾದಂತೆ ತೋರುತ್ತದೆ. ಅವಳ ಮಾನಸಿಕ ಆರೋಗ್ಯ ಚೆನ್ನಾಗಿಲ್ಲ ಎನಿಸುತ್ತದೆ. ನಿಂತಲ್ಲೇ ಮುಂದಿನ ಎಡಗಾಲನ್ನು ಹಿಂದೆ ಮುಂದೆ ಅಲುಗಾಡಿಸುತ್ತಾಳೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ವಾಲುತ್ತಾಳೆ; ಇದು ನಿರಂತರವಾಗಿ ನಡೆಯುತ್ತಿರುತ್ತದೆ.

ಅವಳ ವರ್ತನೆ ಬಹುತೇಕ ಮಾಮೂಲಿಯಾಗಿ ಬಿಟ್ಟಿದೆ. ನಡಿಗೆ ಎಂದರೆ ದೇವಸ್ಥಾನಕ್ಕೆ ಹೋಗುವುದು; ವಾಹನಗಳ ದಟ್ಟಣೆಯ ಮಧ್ಯೆ ಹೋಗಬೇಕು. ಇದು ಕೂಡ ಅವಳಿಗೆ ಒತ್ತಡವನ್ನಷ್ಟೇ ತರುತ್ತದೆ. ಹಲವು ವರ್ಷಗಳಿಂದ ಅವಳು ಇನ್ನೊಂದು ಆನೆಯನ್ನು ನೋಡಿಲ್ಲ; ಇದು ಮಾನಸಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಅಂಶವೇ ಆಗಿದೆ.

ಜಗತ್ತಿನ ಅತ್ಯಂತ ದೊಡ್ಡ, ತುಂಬ ಬುದ್ಧಿಶಾಲಿ ಹಾಗೂ ಕ್ರಿಯಾಶೀಲವಾದ ಒಂದು ಜೀವಿಯನ್ನು ಈ ರೀತಿ ಇಕ್ಕಟ್ಟಿನ ಸ್ಥಳದಲ್ಲಿ ಅಲುಗಾಡಲಾಗದ ಸ್ಥಿತಿಯಲ್ಲಿ ಇರಿಸುವುದೆಂದರೆ ಸಾಕ್ಷಾತ್ ನರಕವೇ ಆಗಿದೆ. ಇದಕ್ಕೆ ಅನುಮತಿ ನೀಡುವ ಮೂಲಕ ಬಹುದೊಡ್ಡ ಅನ್ಯಾಯವೆಸಗಿದ ಈ ವ್ಯವಸ್ಥೆಯನ್ನಷ್ಟೇ ನಾವು ಬೈಯಬೇಕಾಗಿದೆ !



ಬೆಂಗಳೂರಿನ ದುರ್ಗಾಪರಮೇಶ್ವರಿ ದೇವಳದ ಆನೆ ದುರ್ಗಾ.

## ■ ವಿರೂಪಾಕ್ಷ ದೇವಸ್ಥಾನದ ಲಕ್ಷ್ಮಿ

ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ 30 ವರ್ಷದ ಆನೆ ಲಕ್ಷ್ಮಿ ಇದ್ದಾಳೆ. ಸ್ಥಳೀಯ ಖಾಸಗಿ ಮಠ ಈಕೆಗೆ ಆಶ್ರಯ. ಹಿಂದೆ ಇದ್ದ ಆನೆ 1994 ರಲ್ಲಿ ಅಸಹಜ ಸಾವಿಗೆ ಗುರಿಯಾದ ಕಾರಣ ಇವಳನ್ನು ಬದಲಿಯಾಗಿ ತರಲಾಯಿತು. ಸರ್ಕಾರಿ ಇಲಾಖೆಗಳು ಆನೆಗಳನ್ನು ಖಾಸಗಿಯವರಿಗೆ ಮಾರಬಾರದೆಂದು 2000ದಲ್ಲಿ ನಿಷೇಧ ಬಂದಿದ್ದು ಕರ್ನಾಟಕ ಅರಣ್ಯ ಇಲಾಖೆಯಿಂದ ಖರೀದಿಸಲಾಗಿತ್ತು. ಅದಕ್ಕೆ ಮುನ್ನ 1995ರಲ್ಲಿ ಈ ವ್ಯವಹಾರ ನಡೆದಿತ್ತು.

ಲಕ್ಷ್ಮಿ ಈ ದೇವಾಲಯದ ಕಲ್ಲಿನ ನೆಲದ ಮೇಲೆ ದಿನದ 8-10 ತಾಸು ನಿಂತುಕೊಂಡು, ಪ್ರವಾಸಿಗರಿಂದ ಅದು ಇದು ಬೇಡುತ್ತಿರುತ್ತಾಳೆ. ಅದೆಲ್ಲ ಮುಗಿದ ಮೇಲೆ ರಾತ್ರಿಯ ವಿಶ್ರಾಂತಿಗಾಗಿ ಕಾಂಕ್ರಿಟ್ ನೆಲದ ಶೆಡ್ಡಿಗೆ ಕೊಂಡೊಯ್ಯುತ್ತಾರೆ. ಇದೊಂದು ಕೊನೆಯಿಲ್ಲದ ಶಿಕ್ಷೆ. ಬಹಳಷ್ಟು ಹೊತ್ತು ಯಾತ್ರಿಕರನ್ನು ಆಶೀರ್ವದಿಸುತ್ತಾ ಹಣ ಸಂಗ್ರಹಿಸಿ ಮಾವುತನಿಗೆ ಕೊಡಬೇಕು. ಆಕೆ ಸ್ಥೂಲಕಾಯದ ಬೇನೆ ಮತ್ತು ಕಾಲಿನ ಸಮಸ್ಯೆಯಿಂದ ಬಳಲುತ್ತಿದ್ದಾಳೆ. ವ್ಯಾಯಾಮದ ಕೊರತೆ, ಭಕ್ತರು, ಸಾರ್ವಜನಿಕರು ನೀಡುವ ಸೂಕ್ತವಲ್ಲದ ಆಹಾರ, ತಿಂಡಿತಿನಿಸುಗಳು ಅಂತಹ ಪರಿಸ್ಥಿತಿಗೆ ನೇರ ಕಾರಣ.




ಹಂಪಿಯ ವಿರೂಪಾಕ್ಷ ದೇವಾಲಯದ ಆನೆ ಲಕ್ಷ್ಮಿ.

## ■ ನಂಜನಗೂಡು ದೇವಸ್ಥಾನದ ಗೌರಿ

ಮೈಸೂರು ಸಮೀಪದ ನಂಜನಗೂಡು ದೇವಾಲಯದಲ್ಲಿರುವ ಆನೆ ಗೌರಿ. ಪ್ರತಿದಿನ ಬೆಳಗ್ಗೆ 9 ಗಂಟೆಯಿಂದ ಅವಳ ಸೇವೆ ಆರಂಭವಾಗುತ್ತದೆ. ತಲೆಯ ಮೇಲೆ ಹೂಗಳ ಮಾಲೆಗಳು, ತಲೆಗೆಲ್ಲ ಬಣ್ಣ ಬಳಿದಿರುತ್ತಾರೆ. ಅವಳ ಮಾವುತರು ಅವಳನ್ನು ದೇವಾಲಯದ ಮುಂಭಾಗ ಜನಜಂಗುಳಿಯಿರುವ ಚೌಕದಲ್ಲಿ ನಿಲ್ಲಿಸುತ್ತಾರೆ. ಸುತ್ತ



ನಂಜನಗೂಡು ದೇವಾಲಯದಲ್ಲಿರುವ ಆನೆ ಗೌರಿ.

ಒಂದಷ್ಟು ಜನ, ಮೋಟಾರ್‌ಬೈಕ್‌ಗಳು, ಕಾರುಗಳು ಕೂಡ ಇರುತ್ತವೆ. ಬೇಸಿಗೆಯಲ್ಲಿ ಬಿಸಿಲು ಜೋರಾಗಿ ಇರುವಾಗ ಕೂಡ ಗೌರಿಗೆ ನೆರಳಾಗಲಿ ಅಥವಾ ನೀರಿನ ವ್ಯವಸ್ಥೆಯಾಗಲಿ ಇಲ್ಲ.

ಒಂದು ತಾಸಿನಲ್ಲಿ ಗೌರಿ ಏನಿಲ್ಲವೆಂದರೂ ಸುಮಾರು 100 ಜನರಿಗೆ ಆಶೀರ್ವಾದ ಮಾಡಬೇಕು; ಜನರ ಸಾಲೇ ಇರುತ್ತದೆ; ಜನ ಅವಳನ್ನು ಮುಟ್ಟುತ್ತಿರುತ್ತಾರೆ; ಬೈಕ್‌ಗಳ ಸಂಚಾರಕ್ಕೆ ಅನುವು ಮಾಡಿಕೊಡುವುದಕ್ಕಾಗಿ ಮಾವುತರು ಅವಳನ್ನು ಆಚೀಚೆ ತಳ್ಳುತ್ತಿರುತ್ತಾರೆ. ನಿರಂತರವಾಗಿ ಅವಳಿಗೆ ಆಜ್ಞೆಗಳನ್ನು ನೀಡಲಾಗುತ್ತೆ; ಜೊತೆಗೆ ಅಂಕುಶದಿಂದ ಚುಚ್ಚಲಾಗುತ್ತದೆ. ಗೌರಿಯ ದೈಹಿಕ ಸ್ಥಿತಿಯಾದರೋ ಶೋಚನೀಯ; ವ್ಯಾಯಾಮವಿಲ್ಲ ಮತ್ತು ಕಳಪೆ ಆಹಾರ; ಅದರಿಂದಾಗಿ ಆಕೆ ತೀವ್ರ ಸ್ವರೂಪದ ಬೊಜ್ಜಿನಿಂದ ಬಳಲುತ್ತಿದ್ದಾಳೆ. ಕಾಲುಗಳು ಆರೋಗ್ಯಕರವಾಗಿರುವಂತೆ ಯಾವುದೇ ಗಮನ ನೀಡಲಾಗಿಲ್ಲ. ಉಗುರು, ಪಾದದ ಮೆತ್ತೆಗಳೆಲ್ಲ ಅತಿಯಾಗಿ ಬೆಳೆದು ಒಡೆದಿವೆ; ನಡೆಯುವುದು ಅವಳಿಗೆ ತುಂಬ ತ್ರಾಸದಾಯಕವಾಗಿದೆ. ಅವಳು ಮಲಗುವ ಸ್ಥಳ ಕಲ್ಲಿನ ನೆಲ; ಮತ್ತು ಬೀದಿಯಲ್ಲಿ ನಿಂತು ಅವಳ ಕೆಲಸ; ಪರಿಣಾಮ ಅವಳ ಕಾಲುಗಳ ಮೇಲಾಗಿದೆ. ಕಾಳಿಗೆ ಸರಪಳಿ ತೊಡಿಸಿ ನಿಲ್ಲಿಸುವ ಸ್ಥಳ ಒಂದು ಕಾಂಕ್ರೀಟ್ ಗುಂಡಿಯಂತಿದೆ.

## ■ ಉಜ್ಜೈನಿ ಮಠದ ಹೆಣ್ಣಾನೆ

ಬಳ್ಳಾರಿ ಜಿಲ್ಲೆಯ ಶ್ರೀ ಉಜ್ಜೈನಿ ಮಠದಲ್ಲಿ ಹಿಂದೆ ಒಂದು ಗಂಡಾನೆಯಿತ್ತು. ಈಚೆಗೆ ಅದನ್ನು ಕೊಟ್ಟು ಬದಲಿಗೆ ಹೆಣ್ಣಾನೆಯನ್ನು ತರಲಾಯಿತು. ಏಕೆಂದರೆ ಹೆಣ್ಣಾನೆಯನ್ನು ನಿಯಂತ್ರಿಸುವುದು ಮಾವುತರಿಗೆ ಸುಲಭ. ಬಳ್ಳಾರಿ ಪಟ್ಟಣದ ಬೀದಿಗಳಲ್ಲಿ ಬೇಡುತ್ತಾ ಸುತ್ತುವುದು ಅವಳ ಮುಖ್ಯ ಕೆಲಸ. ಹಬ್ಬದ ದಿನಗಳಲ್ಲಿ ಮಾವುತರು ಅವಳನ್ನು 80-90 ಕಿ.ಮೀ. ನಡೆಸುತ್ತಾರೆ; ಅದರಿಂದ ಅವರಿಗೆ ಹೆಚ್ಚಿನ ಸಂಪಾದನೆ. ಆನೆಯ ಪೋಷಣೆ ಅಥವಾ ನಿರ್ವಹಣೆಯಲ್ಲಿ ದೇವಾಲಯದ ಪಾತ್ರವೇನೂ ಇಲ್ಲ. ಕಾಲನ್ನು ಗಮನಿಸಿದಾಗ ಉಗುರಿನ ತುದಿಗೆ ಬಟ್ಟೆ ಸುತ್ತಿದ್ದು ಕಂಡು ಬಂತು. ಅಲ್ಲಿ ಉಂಟಾದ ಗಾಯವನ್ನು ಬಚ್ಚಿಡಲು ಆ ತಂತ್ರ ಅನುಸರಿಸಿರಬೇಕು. ಆನೆಯ ಕೂದಲು ಇರಿಸಿಕೊಂಡರೆ ಅದೃಷ್ಟ ತರುತ್ತದೆಂಬುದು ಕೆಲವರ ನಂಬಿಕೆ. ಅದಕ್ಕಾಗಿ ಕೂದಲುಗಳನ್ನು ಕಿತ್ತು ಪರಿಣಾಮವಾಗಿ ಆ ಗಾಯ ಉಂಟಾಗಿರಬಹುದು.

2013 ರ ಏಪ್ರಿಲ್‌ನಲ್ಲಿ ನಡೆದ ಒಂದು ಆಘಾತಕಾರಿ ಘಟನೆಯಲ್ಲಿ ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನದ ದ್ರೋಣ ಮತ್ತು ಚಂಪಾ ಎಂಬ ಎರಡು ಆನೆಮರಿಗಳನ್ನು ಮೈಸೂರಿನ ಸುತ್ತೂರು ಮಠದ ಲಕ್ಷ್ಮಿ ಹಾಗೂ ಮಾಸ್ತಿ ಎಂಬ ದೊಡ್ಡ ಆನೆಗಳೊಂದಿಗೆ ವಿನಿಮಯ ಮಾಡಲಾಯಿತು. ಇದು ಅರಣ್ಯ ಇಲಾಖೆ ಮಾಡಿದ ನಿಯಮಗಳ ಸ್ಪಷ್ಟ ಉಲ್ಲಂಘನೆ. ಈ ಆನೆಮರಿಗಳು ಇನ್ನೂ ತಮ್ಮ ತಾಯಂದಿರಿಗೆ ತೀರಾ ಅಂಟಿಕೊಂಡಿದ್ದವು; ಗುಂಪಿನಲ್ಲಿ ವಾಸಿಸುತ್ತಿದ್ದವು. ಅವುಗಳನ್ನು ಬನ್ನೇರುಘಟ್ಟ ಉದ್ಯಾನದ ಯೋಗ್ಯ ಪರಿಸರದಿಂದ ತೆಗೆದು ಮೈಸೂರಿನ ಮಠದ ನಗರದ ವಾತಾವರಣದ ಕಾಂಕ್ರೀಟ್ ಕಾಡಿನಲ್ಲಿ ಬಿಡಲಾಯಿತು.



ಮೈಸೂರಿನಲ್ಲಿ ಪ್ರವಾಸಿಗರ ಸವಾರಿ ಹೊತ್ತೊಯ್ಯುವ ಆನೆಯ ಮುಖ ಊದಿರುವುದು.

### ಮೈಸೂರು

ಕರ್ನಾಟಕದ ಖಾಸಗಿ ಮಾಲೀಕತ್ವದ ಆನೆಗಳ ಕರುಣಾಜನಕ ಕಥೆಗೆ ಮೈಸೂರು ಅರಮನೆ ಅಂಬಾ ವಿಲಾಸದಿಂದ ನಡೆಯುವ ಆನೆಗಳ ದುರ್ಬಳಕೆಯನ್ನು ಕೂಡ ಸೇರಿಸಬಹುದು. ಆ ಬಗ್ಗೆ ಬಹಳಷ್ಟು ದೂರುಗಳು ಬಂದಿವೆ. ಈ ಖಾಸಗಿ ಮಾಲೀಕತ್ವದ ಆನೆಗಳಿಂದ ತುಂಬ ಕೆಲಸ ಮಾಡಿಸಲಾಗುತ್ತದೆ. ಅರಮನೆ ಆವರಣದಲ್ಲಿ ಟಿಕೆಟಿಟ್ಟು ಮೋಜಿನ ಸವಾರಿ ನಡೆಸುತ್ತಾರೆ. ಬಿಸಿಲಿನ ಮಧ್ಯೆ ನೆರಳು ಹಾಗೂ ನೀರು ಲಭ್ಯವಿರುವುದಿಲ್ಲ. ಮತ್ತು ಅಂಕುಶದ ಅತಿಯಾದ ಬಳಕೆ ಇದ್ದೇ ಇದೆ.

ಅರಮನೆಯಲ್ಲಿ ಆರು ಆನೆಗಳಿದ್ದು, ಪ್ರತಿದಿನ ಎರಡನ್ನು ಬೆಳಗ್ಗೆ 10-30 ರಿಂದ ಸಂಜೆ 5-30 ರವರೆಗೆ ಮೋಜಿನ ಸವಾರಿಗೆ ಬಳಸಲಾಗುತ್ತದೆ. ಅರಮನೆ ಕಚೇರಿಯು ಪ್ರತಿ ಸವಾರಿಗೆ 75 ರೂ. ಪಡೆಯುತ್ತದೆ; ವಿದೇಶೀಯರಿಗೆ 100 ರೂ.



**ಬಳ್ಳಾರಿಯ ರಸ್ತೆಗಳಲ್ಲಿ ನಡೆದು ಉಜ್ಜೈನಿ ಮಠದ ಹೆಣ್ಣಾನೆಯ ಪಾದ ಒಡೆದಿರುವುದು.**

ಮಠದ ಹಿಂದಿನ ಆನೆಗಳಾದ ಲಕ್ಷ್ಮಿ ಮತ್ತು ಮಾಸ್ತಿಯ ಬದುಕು ಮತ್ತು ಮಾನಸಿಕ ಆರೋಗ್ಯಗಳು ಮೊದಲೇ ಹಾಳಾಗಿದ್ದವು. ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ಕೇಂದ್ರ ಮೃಗಾಲಯ ಪ್ರಾಧಿಕಾರದ ನಿಯಮಗಳಿಗೆ ವ್ಯತಿರಿಕ್ತವಾಗಿ ಕೈಗೊಂಡ ಈ ಕ್ರಮದಿಂದಾಗಿ ಅಧಿಕಾರಿಗಳಲ್ಲಿದ್ದ ಜನರ ವಿಶ್ವಾಸ ಜರ್ರನೆ ಕುಸಿಯುವಂತಾಗಿದೆ. ಏಕೆಂದರೆ ವನ್ಯ ಮೃಗಗಳ ಅನುಸೂಚಿ 1 ರಲ್ಲಿ ಬರುವ ಈ ಪ್ರಾಣಿಯ ಸಂರಕ್ಷಣೆ, ಆರೋಗ್ಯ ಮತ್ತು ಸುಸ್ಥಿತಿಯ ಬಗ್ಗೆ ಅವರು ಸಡಿಲ ಧೋರಣೆಯನ್ನು ತಳೆಯಬಾರದಿತ್ತು.

ಮೇಲೆ ಹೇಳಿದ ಎಲ್ಲ ಸಂದರ್ಭಗಳಲ್ಲಿ ವನ್ಯಮೃಗ ಸಂರಕ್ಷಣ ಕಾಯ್ದೆ, ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ, ಕೇಂದ್ರ ಮೃಗಾಲಯ ಪ್ರಾಧಿಕಾರದ ನಿಯಮಗಳು ಮುಂತಾದವುಗಳ ಹಲವು ಸೆಕ್ಷನ್‌ಗಳು ಮತ್ತು ಕಾನೂನುಗಳು ಅನ್ವಯವಾಗುತ್ತವೆ. ರಕ್ಷಣಾತ್ಮಕ ನಿಯಮಗಳು ಮತ್ತು ನಿರ್ಬಂಧಗಳು ಇದ್ದಾಗಲೂ ವ್ಯವಸ್ಥೆಯಲ್ಲಿ ಆನೆಗಳ ಕಾನೂನುಬಾಹಿರ ವ್ಯಾಪಾರ ಮತ್ತು ಸಾಮಾನ್ಯ ಸಾಕುಪ್ರಾಣಿಗಳಿಗೆ ಕೂಡ ಒಗ್ಗದಂತಹ ಸನ್ನಿವೇಶಗಳಲ್ಲಿ ಆನೆಗಳನ್ನು ಇರಿಸಿಕೊಳ್ಳುವುದು ನಡೆಯುತ್ತಲೇ ಇದೆ. ಆದ್ದರಿಂದ ಸಾಕಾನೆಗಳಿಗೆ ಒದಗಿರುವ ಈ ಪರಿಸ್ಥಿತಿಗೆ ಕೇವಲ ಅಧಿಕಾರಿಗಳು ಮತ್ತು ಸರ್ಕಾರಿ ಸಂಸ್ಥೆಗಳನ್ನೇ ಹೊಣೆಗಾರರಾಗಿ ಮಾಡಬೇಕಾಗುತ್ತದೆ!

ಇದಕ್ಕೆ ಪರಿಹಾರವೆಂದರೆ, ಜನ ಇದನ್ನು ಪ್ರತಿಭಟಿಸಿ ಒಗ್ಗಟ್ಟಿನಿಂದ ಕಾರ್ಯಾಚರಣೆಗೆ ಇಳಿಯುವುದು. ಈ ಬೃಹತ್ ಪ್ರಾಣಿಯನ್ನು ಇಡೀ ಜೀವಮಾನ ಕೂಡಿಹಾಕಿ ಹಿಂಸೆಗೊಳಪಡಿಸುವುದನ್ನು ತಡೆಯಲೇ ಬೇಕಾಗಿದೆ. ದೇವಸ್ಥಾನಗಳಿಗೆ ಹೋದಾಗ ಅಲ್ಲಿನ ಆನೆ ಇಂತಹ ಕ್ಲಿಷ್ಟಕರ ಪರಿಸ್ಥಿತಿಯಿದ್ದರೆ ಜನ ದೇವಾಲಯದ ಅಧಿಕಾರಿಗಳ ಮುಂದೆ ಪ್ರತಿಭಟಿಸಿ ತಮ್ಮ ದೂರನ್ನು ಲಿಖಿತವಾಗಿಯೇ ನೀಡಬೇಕು. ದೇವಾಲಯದಲ್ಲಿ ಆನೆಯನ್ನು ಇರಿಸಿಕೊಂಡಾಗ ಗರಿಷ್ಠ ಲಾಭವಾಗುವುದು ಮಾವುತರಿಗೆ; ಅದಕ್ಕಾಗಿ ಅವರು ಸಾಧ್ಯವಾದಷ್ಟು ಹೊತ್ತು ಆನೆಯನ್ನು ಬಳಸಿಕೊಳ್ಳುತ್ತಾರೆ. ಆನೆಗಳಿಗೆ ಎಂತಹ ಆಹಾರವನ್ನು ಕೊಡಲಾಗುತ್ತಿವೆ? ನಡೆಸಲಾಗುತ್ತದೆ? ಎಷ್ಟು ನಡೆಸಲಾಗುತ್ತಿದೆ? ಆರೋಗ್ಯ ತಪಾಸಣೆ ನಡೆಸಿ ಅಗತ್ಯವಾದ ಚಿಕಿತ್ಸೆ ನೀಡುತ್ತಿದ್ದಾರೆಯೇ ಎಂದು ಪರಿಶೀಲಿಸಲು ನಮ್ಮಲ್ಲಿ ಯಾವುದೇ ವ್ಯವಸ್ಥೆಯಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಮಾವುತರೇ ನಿರ್ಣಾಯಕರು. ಅವರು ವಿಭಿನ್ನ ಹಿನ್ನೆಲೆಗಳಿಂದ ಬಂದವರಾಗಿದ್ದು ಯಾವುದೋ ಒಂದು ವಿಧಾನವನ್ನು ಅನುಸರಿಸುತ್ತಾರೆ. ಅದು ಹೆಚ್ಚಾಗಿ ಕಾನೂನುಬಾಹಿರವಾಗಿದ್ದು ಈ ಬೃಹತ್ ಜೀವಿಯ ಕಲ್ಯಾಣ ಅಥವಾ ಸುಧಾರಣೆ (ಪರಿಹಾರೋಪಾಯ) ಎಂಬುದು ಅದರಲ್ಲಿ ಇರುವುದೇ ಇಲ್ಲ.

– ಅನು : **ಮಂಜುನಾಥ ಭಟ್ ಹೆಚ್.**

## ಅರಮನೆಯ ಆನೆಗಳು

ಭಾರತ ಸರ್ಕಾರವು ಪ್ರದರ್ಶನದ ಪ್ರಾಣಿಗಳ (ನೋಂದಣಿ) ನಿಯಮಗಳು - 2001 (Performing Animals) (Registration Rules) ಎನ್ನುವ ಅಧಿಸೂಚನೆಯನ್ನು ಹೊರಡಿಸಿದೆ. ಅದರ ಪ್ರಕಾರ ಪ್ರದರ್ಶನದ ಉದ್ದೇಶಕ್ಕಾಗಿ ಯಾವುದೇ ಪ್ರಾಣಿಗೆ ತರಬೇತಿ ಕೊಡುವುದಾದರೆ ಅದನ್ನು ಅರಣ್ಯ-ಪರಿಸರ ಇಲಾಖೆಯ ಅಧೀನದ ಭಾರತ ಪ್ರಾಣಿಕಲ್ಯಾಣ ಮಂಡಳಿಯಲ್ಲಿ ನೋಂದಾಯಿಸಬೇಕು. ಅರಮನೆ ಆಡಳಿತವು ಈ ಆನೆಗಳಿಗೆ ಸಂಬಂಧಿಸಿ ಪಿಎಆರ್ ಆರ್‌ನಲ್ಲಿ ನೋಂದಾಯಿಸಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ಮೋಜಿನ ಸವಾರಿಗೆ ಆನೆಗಳ ಬಳಕೆ ಕಾನೂನುಬಾಹಿರವೆನಿಸುತ್ತದೆ. ಪ್ಯಾಲೇಸ್ ಗ್ರೌಂಡ್‌ನ ಆನೆಗಳ ಮಾಲೀಕತ್ವಕ್ಕೆ ಸಂಬಂಧಿಸಿ ಕಾಗದ ಪತ್ರಗಳು ಹಾಗೂ ಅವುಗಳಿಗೆ ಮೈಕ್ರೋಚಿಪ್ ಅಳವಡಿಸಿದ್ದೂ ಇಲ್ಲ.



**ಅರಮನೆ ಅಂಬಾ ವಿಲಾಸದಿಂದ ನಡೆಯುವ ದುರ್ಬಳಕೆ.**